**ಪತ್ರಿಕಾ ಪ್ರಕಟಣೆ**

**ಬೆಂಗಳೂರು ಗ್ರಾಮಾಂತರ ಜಿಲ್ಲೆ. ಹೊಸಕೋಟೆ ಉಪ ವಿಭಾಗ**

**ಆವಲಹಳ್ಳಿ ಪೊಲೀಸ್ ಠಾಣೆ**

# "ಸರ್ಕಾರಿ ಕೆರೆ ಒತ್ತುವರಿ ಆರೋಪಿ ಬಂಧನ"

ದಿನಾಂಕ:13/05/2020 ರಂದು ಸಂಜೆ 6-15 ಗಂಟೆಯಲ್ಲಿ ಪಿರ್ಯಾದಿ ಕಿಶೋರ್ ಕುಮಾರ್ ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ. ಎಲೆ ಮಲ್ಲಪ್ಪ ಶೆಟ್ಟಿ ಕೆರೆಯ ಪಶ್ಚಿಮ ದಿಕ್ಕಿನಲ್ಲಿ ಕೆರೆಗೆ ಮಣ್ಣು ತುಂಬಿ ರಸ್ತೆ ಹಾಗು ಹೊಸದಾಗಿ ಮಣ್ಣು ತುಂಬಿ ರಸ್ತೆ ಹಾಗು ಹೊಸದಾಗಿ ಚರಂಡಿ ನಿರ್ಮಿಸಿರುವುದನ್ನು ದಿನಾಂಕ:13/05/2020 ರಂದು ಗಮನಿಸಲಾಗಿದ್ದು ಸದರಿ ಒತ್ತುವರಿಯನ್ನು ಮೇಲ್ಕಾಣಿಸಿದ ದೂರಿನಲ್ಲಿ ಈಗಾಗಲೇ ತಿಳಿಸಿರುವಂತೆ ಎಂ/ಎಸ್ ಶ್ರೀ ಸಾಯಿ ಗಾರ್ಡನ್ ರವರು ಮಾಡಿರುವುದು ಕಂಡು ಬಂದಿದ್ದು ಸದರಿ ಸಾಯಿ ಗಾರ್ಡನ್ ಮಾಲಿಕರ ವಿರುದ್ಧ ಎಫ್.ಐ.ಆರ್ ದಾಖಲಿಸಿ ಕಾನೂನಿನಂತೆ ಕ್ರಮ ಕೈಗೊಂಡು ಸರ್ಕಾರಿ ಒಡೆತನದ ಕೆರೆಯನ್ನು ಸಂರಕ್ಷಿಸಲು ಅಗತ್ಯ ಕ್ರಮ ಕೈಗೊಳ್ಳಲು ಕೋರಲಾಗಿದೆ ಎಂದು ನೀಡಿದ ದೂರನ್ನು ಪಡೆದು ಠಾಣಾ ಮೊ.ನಂ 103/2020 ಕಲಂ:192(ಎ). ಕೆ.ಎಲ್.ಆರ್ ಆಕ್ಟ್ ಮತ್ತು 447 ಐಪಿಸಿ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತೆ. ಈ ಬಗ್ಗೆ ಸ್ಥಳ ಪರಿಶೀಲನೆಗೆ ಬಂದ ಇಲಾಖೆಯ ಹಿರಿಯ ಅಧಿಕಾರಿಗಳು , ಸದರಿ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಪ್ರಕರಣದ ಆರೋಪಿ ಪತ್ತೆ ಬಗ್ಗೆ ಆವಲಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರಾದ ಪ್ರದೀಪ್ ಪೂಜಾರಿ.ಕೆ. ರವರ ನೇತೃತ್ವದಲ್ಲಿ ತಂಡವನ್ನು ರಚನೆ ಮಾಡಿ ನಿಗದಿತ ಕಾಲಾವಧಿಯಲ್ಲಿ ಪ್ರಕರಣ ಪತ್ತೆ ಮಾಡುವಂತೆ ಆಧೇಶಿಸಿರುತ್ತಾರೆ.

ಪ್ರಕರಣದ ತನಿಖೆ ಮುಂದುವರೆಸಿ ದಿನಾಂಕ: 04/03/2021 ರಂದು ಬಂದ ಮಾಹಿತಿ ಮೇರೆಗೆ ಆರೋಪಿಯಾದ ಆರ್. ರಾಮಮೂರ್ತಿ ಬಿನ್ ರಾಮಕೃಷ್ಣಪ್ಪ 53 ವರ್ಷ ಬಲಜಿಗರು ರಿಯಲ್ ಎಸ್ಟೇಟ್ ವ್ಯವಹಾರ ಮಾಲಿಕರು ಶ್ರೀ ಸಾಯಿ ಗಾರ್ಡನ್ ಮಂಜುಶ್ರೀ ಲ್ಯಾಂಡ್ ಡೆವಪಲರ್ ಮತ್ತು ಕನ್ಸಟ್ರಕ್ಷನ್ ನಂ 65 ಪ್ರಿಯಾಂಕ ಅಪಾರ್ಟ್ ಮೆಂಟ್ ದೇವಕಿ ಅಪ್ಪರಾವ್ ಲೇಔಟ್ ಯರ್ರಯ್ಯನಪಾಳ್ಯ ಮುಖ್ಯ ರಸ್ತೆ ದೂರವಾಣಿ ನಗರ ಪೊಸ್ಟ್ ರಾಮಮೂರ್ತಿ ನಗರ ಬೆಂ-16. ಈತನನ್ನು ಕೋಲಾರ ಜಿಲ್ಲೆ, ಬಂಗಾರಪೇಟೆ ಯಲ್ಲಿ ದಸ್ತಗಿರಿ ಮಾಡಿ ದಿನಾಂಕ 05/03/2021 ರಂದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆ.

## –:ದಸ್ತಗಿರಿ ಮಾಡಿರುವ ಆರೋಪಿ ವಿವರ:–

**ಆರ್. ರಾಮಮೂರ್ತಿ ಬಿನ್ ರಾಮಕೃಷ್ಣಪ್ಪ 53 ವರ್ಷ ಬಲಜಿಗರು ರಿಯಲ್ ಎಸ್ಟೇಟ್ ವ್ಯವಹಾರ ಮಾಲಿಕರು ಶ್ರೀ ಸಾಯಿ ಗಾರ್ಡನ್ ಮಂಜುಶ್ರೀ ಲ್ಯಾಂಡ್ ಡೆವಪಲರ್ ಮತ್ತು ಕನ್ಸಟ್ರಕ್ಷನ್ ನಂ 65 ಪ್ರಿಯಾಂಕ ಅಪಾರ್ಟ್ ಮೆಂಟ್ ದೇವಕಿ ಅಪ್ಪರಾವ್ ಲೇಔಟ್ ಯರ್‍ರಯ್ಯನಪಾಳ್ಯ ಮುಖ್ಯ ರಸ್ತೆ ದೂರವಾಣಿ ನಗರ ಪೋಸ್ಟ್ ರಾಮಮೂರ್ತಿ ನಗರ ಬೆಂ-16**



ಸದರಿ ಕಾರ್ಯಚರಣೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೋಲೀಸ್ ಆಧೀಕ್ಷಕರಾದ ಶ್ರೀ ರವಿ.ಡಿ. ಚನ್ನಣ್ಣವರ್ ಐ.ಪಿ.ಎಸ್, ಬೆಂಗಳೂರು ಜಿಲ್ಲಾ ಆಪರ ಪೋಲೀಸ್ ಆಧೀಕ್ಷಕರಾದ ಶ್ರೀ ಲಕ್ಷ್ಮಿ ಗಣೇಶ್,ಕೆ. ಕೆಎಸ್‌ಪಿಎಸ್ ಹಾಗೂ ಹೊಸಕೋಟೆ ಉಪ–ವಿಭಾಗದ ಉಪಧೀಕ್ಷಕರಾದ ಶ್ರೀ ಉಮಶಂಕರ್. ಕೆಎಸ್‌ಪಿಎಸ್ ರವರ, ಹಾಗೂ ಹೊಸಕೋಟೆ ವೃತ್ತ ಆರಕ್ಷಕ ವೃತ್ತ ನಿರೀಕ್ಷಕರಾದ ಶ್ರೀ ವಿ.ಡಿ.ಶಿವರಾಜ್ ರವರ ಮಾರ್ಗದರ್ಶನದಲ್ಲಿ ಆವಲಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ರವರಾದ ಶ್ರೀ ಪ್ರದೀಪ್ ಪೂಜಾರಿ ಕೆ. ರವರ ನೇತ್ರುತ್ವದಲ್ಲಿ ಮತ್ತು ಸಿಬ್ಬಂದಿಯವರಾದ, ಹೆಚ್ ಸಿ 322 ದತ್ತಾತ್ರೇಯ, ಪಿಸಿ 844 ಶ್ರೀನಿವಾಸ್ ಎಂ ಆರ್, ರವರ ತಂಡವು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ದಸ್ತಗಿರಿ ಮಾಡುವಲ್ಲಿ ಯಶಸ್ವಿಯಾಗಿರುತ್ತಾರೆ.

(ರವಿ.ಡಿ.ಚನ್ನಣ್ಣನವರ್, ಐಪಿಎಸ್)
ಪೊಲೀಸ್ ಅಧೀಕ್ಷಕರು
ಬೆಂಗಳೂರು ಜಿಲ್ಲೆ